ವಿಜಯಕರ್ನಾಟಕ

ನೇರ ಫೋನ್ ಇನ್

ಆತ್ಮೀಯ ಓದುಗರೇ,

ಮಾತು, ಕಿವಿ ಸಮಸ್ಯೆಯೇ?

ಹಿಂಜರಿಕೆ ಬೇಡ.. ಕರೆಮಾಡಿ

ಎಲ್ಲಾ ರೀತಿಯ ಸಲಹೆ, ಮಾರ್ಗದರ್ಶನ ನೀಡಲು ಮೈಸೂರಿನ **ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ** ಸಿದ್ಧವಿದೆ. ವಿಶ್ವ ಶ್ರವಣ ದಿನದ ಹಿನ್ನೆಲೆಯಲ್ಲಿ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕಿ **ಪ್ರೊ. ಎಂ. ಪುಷ್ಪಾವತಿ** ಅವರು ಮಾರ್ಚ್ 1 ರಂದು 'ವಿಜಯ ಕರ್ನಾಟಕ'ದ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಶ್ರವಣ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಪ್ರಶ್ನೆ, ಸಂದೇಹಗಳಿಗೆ ಉತ್ತರಿಸುವರು.

ಐಶ್ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ ಅವರಿಗೆ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆಯಿರಿ

ಕರೆ ಮಾಡಿ **0821 - 2421904**

VK WhatsApp **7899867700**

ಮಾರ್ಚ್ 1, ಭಾನುವಾರ

ಕರೆ ಮಾಡುವ ಸಮಯ: ಬೆಳಗ್ಗೆ 10.30 ರಿಂದ 11.30

ಮಾತು, ಕಿವಿ ಸಮಸ್ಯೆಯಿದ್ದರೆ ವಾಕ್–ಶ್ರವಣ ತಜ್ಞರನ್ನು ಭೇಟಿ ಮಾಡಿ

ಕಿವಿಗಳನ್ನು ಯಾವತ್ತೂ ಕಡೆಗಣಿಸಬೇಡಿ

ಗರ್ಭಿಣಿಯಾಗಿದ್ದ ತಂಗಿ ಸುಭದ್ರೆಯನ್ನು ಕೃಷ್ಣ ರಥದಲ್ಲಿ ಕೂರಿಸಿಕೊಂಡು ದ್ವಾರಕೆಗೆ ಕರೆದುಕೊಂಡು ಹೋಗುತ್ತಿದ್ದಾಗಿನ ಒಂದು ಸಂದರ್ಭ.

ಪ್ರಯಾಣ ಕಾಲದಲ್ಲಿ ತಂಗಿಗೆ ಬೇಸರವಾಗದಿರಲೆಂದು ಕೃಷ್ಣ ಯುದ್ಧಗಳ ವಿಚಾರವಾಗಿ ವಿವರಿಸುತ್ತಾ ಸಾಗಿದ್ದ. ಈ ಸಂದರ್ಭದಲ್ಲಿ ಆತ ಚಕ್ರವ್ಯೂಹವನ್ನು ಹೇಗೆ ಭೇದಿಸಬೇಕು ಎಂಬುದನ್ನು ವಿವರಿಸುತ್ತಿದ್ದ. ಸುಭದ್ರ ಅಣ್ಣನ ವಿವರಣೆಗಳಿಗೆ ಆಗಾಗ ''ಹೂಂ'' ಗುಟ್ಟುತ್ತಿದ್ದಳು. ಇದ್ದಕ್ಕಿದ್ದಂತೆ ಚಿಕ್ಕ ಮಗು ಹೂಂ ಗುಟ್ಟಿದಂತೆ ಕೇಳಿಸಿತು. ರಥ ನಡೆಸುತ್ತಿದ್ದ ಕೃಷ್ಣ ಹಿಂತಿರುಗಿ ನೋಡಿದಾಗ ಆಕೆ ರಥದಲ್ಲಿ ಒರಗಿಕೊಂಡು ನಿದ್ರಿಸುತ್ತಿದ್ದಳು. ಆದರೆ ಆಕೆಯ ಗರ್ಭದಿಂದ ''ಹೂಂ'' ಎಂಬ ಮಗುವಿನ ಧ್ವನಿ ಕೇಳಿಸುತ್ತಿತ್ತು! ಅಂದರೆ ಗರ್ಭಸ್ಥ ಶಿಶುವು ಹೂಂ ಗುಡುತ್ತಿತ್ತು. ಅಂದರೆ ಗರ್ಭದಲ್ಲಿದ್ದಾಗ ಶಿಶುವು ಶಬ್ದಗಳನ್ನು ಕೇಳಿಸಿಕೊಳ್ಳುತ್ತದೆ!

ಇವು ಪುರಾಣಗಳ ಸಮಾಚಾರವಾಯಿತು. ಆದರೆ ಇದೇ ರೀತಿ ಎಲ್ಲ ಮಕ್ಕಳೂ ತಾಯಿ ಗರ್ಭದಲ್ಲಿದ್ದಾಗ ಶಬ್ದಗಳನ್ನು ಕೇಳಿಸಿಕೊಳ್ಳುತ್ತವೆ.

ಭ್ರೂಣಾವಸ್ಥೆಯ 3–4 ತಿಂಗಳಿಂದಲೇ ಮಾನವನ ಶ್ರವಣ ಶಕ್ತಿ ಅಭಿವೃದ್ಧಿಯಾಗಲಾರಂಭಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ, ಗರ್ಭಿಣಿಗೆ ಬಳೆ ತೊಡಿಸುವ ಒಂದು ಸಂಪ್ರದಾಯವಿದೆ. ಆಗ ಬಳೆಗಳ ಸದ್ದು ಉಂಟಾಗಿ ಗರ್ಭದಲ್ಲಿರುವ ಶಿಶುವಿನ ಕಿವಿಗಳು ಪ್ರಚೋದನೆಗೊಳ್ಳುತ್ತವೆ. ಹೀಗೆ ನಮ್ಮ ಸಂಸ್ಕೃತಿಯಲ್ಲಿನ ಸಂಪ್ರದಾಯವೊಂದು ಅಪ್ರತ್ಯಕ್ಷವಾಗಿಯೇ ಶ್ರವಣ ಶಕ್ತಿಯ ಮೌಲ್ಯವನ್ನು ತಿಳಿಸಿಕೊಡುತ್ತದೆ.

ಕೆಲ ನಂಬಿಕೆಗಳು ಸತ್ಯವಲ್ಲ

ಈ ವೈಜ್ಞಾನಿಕ ಯುಗದಲ್ಲೂ ಕೂಡ ಕೆಲವು ಸುಳ್ಳು ನಂಬಿಕೆಗಳು ಜನಸಾಮಾನ್ಯರ ಹೃದಯದಾಳದಲ್ಲಿ ಬೇರು ಬಿಟ್ಟಿವೆ ಎಂದರೆ ಅಚ್ಚರಿಯಾಗುತ್ತದೆ. ಉದಾಹರಣೆಗೆ– 1.ಮಕ್ಕಳು ದೊಡ್ಡವರಾಗುತ್ತಾ ಬಂದಂತೆ ಮಾತನಾಡಲು ಕಲಿಯುತ್ತಾರೆ. 2.ದೇವರ ಪೂಜೆ, ಹರಕೆಗಳಿಂದ ವ್ಯಕ್ತಿಯೊಬ್ಬನ ಶ್ರವಣ ಶಕ್ತಿಯು ಉತ್ತಮಗೊಳ್ಳುತ್ತದೆ. 3.ಕಿವಿಯೊಳಗೆ ಎಣ್ಣೆಯನ್ನು ಬಿಡುವುದರಿಂದ ಶ್ರವಣ ಶಕ್ತಿಯು ತೀಕ್ಷ್ಣಗೊಳ್ಳುತ್ತದೆ – ಇತ್ಯಾದಿ

ಇಂತಹ ನಂಬಿಕೆಗಳಿಗೆ ಯಾವುದೇ ವೈಜ್ಞಾನಿಕ ಆಧಾರಗಳು ಇಲ್ಲ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಪ್ರಕಾರ ಭಾರತದಲ್ಲಿ 63 ಮಿಲಿಯ ಜನರು (ಅಂದರೆ ಶೇ.6.3) ಗಮನಾರ್ಹ ಪ್ರಮಾಣದಲ್ಲಿ ಶ್ರವಣಶಕ್ತಿಯ ನಷ್ಟಕ್ಕೆ ಗುರಿಯಾಗಿದ್ದಾರೆ.

ಸಾವಿರ ಮಕ್ಕಳಲ್ಲಿ ನಾಲ್ಕು ಮಕ್ಕಳು ತೀವ್ರವಾದ ಹಾಗೂ ಗಂಭೀರ ಸ್ವರೂಪದ ಶ್ರವಣ ಶಕ್ತಿಯ ನಷ್ಟಕ್ಕೆ ಒಳಗಾಗಿದ್ದಾರೆ. ಮಾತ್ರವಲ್ಲ, ಶೇ.7ರಷ್ಟು ಜನರು ಹುಟ್ಟಿನಿಂದಲೇ ಶ್ರವಣಶಕ್ತಿಯನ್ನು ಕಳೆದುಕೊಂಡಿರುತ್ತಾರೆ.

ಎಲ್ಲ ನವಜಾತ ಶಿಶುಗಳನ್ನು ಹುಟ್ಟಿದ ಒಂದು ತಿಂಗಳ ಒಳಗಾಗಿ ತಪಾಸಣೆಗೆ ಒಳಪಡಲೇಬೇಕು ಎಂಬುದು ಶಿಶು ತಜ್ಞರ ಶಿಫಾರಸು. ಸಂಸತ್ತಿನ ಜಂಟಿ ಕಮಿಟಿ ಕೂಡ ಇದೇ ವಿಷಯವನ್ನು ಹೇಳಿದೆ. ಪ್ರಾಥಮಿಕ ಹಂತದ ತಪಾಸಣೆಯನ್ನು ಎಲ್ಲ ನವಜಾತ ಶಿಶುಗಳಿಗೂ ಮಾಡಲೇಬೇಕು. ನವಜಾತ ಶಿಶುವೊಂದು ಪ್ರಾಥಮಿಕ ಹಂತದ ತಪಾಸಣೆಯಲ್ಲಿ ತೇರ್ಗಡೆ ಹೊಂದದಿದ್ದರೆ ಮರು ತಪಾಸಣೆ ಮಾಡಿಸಬೇಕೆಂದು ಶಿಫಾರಸು ಮಾಡಲಾಗಿದೆ. ನವಜಾತ ಶಿಶುವು ಪುನರ್ ತಪಾಸಣೆಯಲ್ಲೂ ತೇರ್ಗಡೆಯಾಗದಿದ್ದ ಪಕ್ಷದಲ್ಲಿ ವಿವರವಾದ ಶ್ರವಣ ಪರೀಕ್ಷೆಯನ್ನು ಮಾಡಿಸಬೇಕಾಗುತ್ತದೆ.

ವಿಶ್ವ ಶ್ರವಣ ದಿನಾಚರಣೆ

ವಿಶ್ವ ಆರೋಗ್ಯ ಸಂಸ್ಥೆಯ ವತಿಯಿಂದ ಪ್ರತಿವರ್ಷ ಮಾರ್ಚ್ 3ರಂದ ವಿಶ್ವ ಶ್ರವಣ ದಿನವನ್ನು ಆಚರಿಸಲಾಗುವುದು. ಕಿವುಡತನ ಹಾಗೂ ಶ್ರವಣ ಶಕ್ತಿಯ ನಷ್ಟವನ್ನು ಹೇಗೆ ತಡೆಯಬೇಕೆಂಬ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದೇ ಶ್ರವಣ ದಿನದ ಉದ್ದೇಶ.

2020ರ ವಿಶ್ವ ಶ್ರವಣ ದಿನಕ್ಕಾಗಿ ಬಹು ಮುಖ್ಯ ಸಂದೇಶ

ನಮ್ಮ ಪಂಚೇಂದ್ರಿಯಗಳಲ್ಲಿ ಕಿವಿಯೂ ಒಂದು ಪ್ರಮುಖ ಅಂಗ. ಇದು ಸರಿಯಿಲ್ಲದಿದ್ದರೆ ನೀವು ಸುಮಧುರ ಸಂಗೀತವನ್ನಾಗಲಿ, ಇತರರು ಆಡಿದ ಮಾತುಗಳನ್ನಾಗಲಿ, ಯಾವುದೇ ವಿಧದ ಶಬ್ದವನ್ನೂ ಕೇಳಿಸಿಕೊಳ್ಳಲು ಸಾಧ್ಯವಿಲ್ಲ. ಪರಸ್ಪರ ಸಂಪರ್ಕಕ್ಕೆ ಕಿವಿಯು ಒಂದು ಬಹುಮುಖ್ಯ ಸಾಧನ.

- ಜೀವಿತದ ಎಲ್ಲ ಹಂತಗಳಲ್ಲೂ ವ್ಯಕ್ತಿಯೊಬ್ಬನಿಗೆ ಸರಿಯಾದ ಶ್ರವಣ ಶಕ್ತಿ ಇರಬೇಕು.
- ಶ್ರವಣ ಶಕ್ತಿ ಕುಂದಿದ ವ್ಯಕ್ತಿಗಳಿಗೆ ಸೂಕ್ತ ಸಮಯದಲ್ಲಿ, ಸರಿಯಾದ ಚಿಕಿತ್ಸೆ ದೊರೆತರೆ ಆತನ ವಿದ್ಯಾಭ್ಯಾಸಕ್ಕೆ, ನೌಕರಿಗೆ ಹಾಗೂ ಸಂವಹನಕ್ಕೆ ಅನುಕೂಲ ವಾಗುತ್ತದೆ.
- ಶ್ರವಣ ಶಕ್ತಿಯ ನಷ್ಟದ ವಿಚಾರದಲ್ಲಿ, ಶ್ರವಣ ಯಂತ್ರದ ಬಳಕೆಯ ವಿಚಾರದಲ್ಲಿ ಜಾಗತಿಕವಾಗಿ ತಿಳಿವಳಿಕೆ ಸಾಲದು.
- ಆರೋಗ್ಯ ತಪಾಸಣೆಯ ಜತೆಗೆ ಜನಸಾಮಾನ್ಯರಿಗೆ ಶ್ರವಣ ದೋಷದ ತಪಾಸಣೆಯೂ ದೊರೆಯುವಂತಾಗಬೇಕು.

ಕನ್ನಡಕದಂತೆ ಶ್ರವಣ ಯಂತ್ರ ಧರಿಸಿ

ನೀವು ಒಂದು ವಾಹನವನ್ನು ಕೊಳ್ಳುತ್ತೀರಿ. ಅದನ್ನು ಸರಿಯಾಗಿ ನಿರ್ವಹಣೆ ಮಾಡಿದ್ದರೆ ಅದು ಕೆಟ್ಟು ಕೈಕೊಡಬಹುದು. ಇದೇ ಮಾತು ಕಿವಿಗೂ ಅನ್ವಯಿಸುತ್ತದೆ. ಅದರ ನಿರ್ವಹಣೆಯನ್ನು ನಾವು ಸರಿಯಾಗಿ ಮಾಡುತ್ತಿದ್ದರೆ ಶಬ್ದಗಳನ್ನು ಕೇಳಿಸಿಕೊಳ್ಳಲು ಅನುಕೂಲವಾಗುತ್ತದೆ.

ಕಿವಿಯ ನಿರ್ವಹಣೆ ಹೇಗೆ?

- ಕಿವಿಯೊಳಗೆ ಧಾನ್ಯ, ಬೀಜ ಇತ್ಯಾದಿ ಹೋಗದಂತೆ ನೋಡಿಕೊಳ್ಳಿ.
- ಕಿವಿಯ ಮೇಲೆ ಬಲವಾದ ಏಟು ಬಿದ್ದರೆ, ಕಿವಿಯ ತಮಟೆ ಹಾನಿಗೊಂಡು ಕಿವಿ ಕೇಳಿಸದಂತಾಗಬಹುದು.
- ಪಟಾಕಿ, ವಾಹನಗಳ ಕಿವಿಗಡಚಿಕ್ಕುವ ಶಬ್ದಗಳಿಂದ ದೂರವಿರಿ. ಶಬ್ದ ಉತ್ಪತ್ತಿಯಾಗುವ ಸ್ಥಳದಲ್ಲಿ ಕೆಲಸ ಮಾಡುವುದಿದ್ದಲ್ಲಿ, ಕಿವಿಯ ರಕ್ಷಕ ಸಾಧನಗಳನ್ನು ಬಳಸಿರಿ.
- ಕಿವಿ ಕಡಿಯುತ್ತದೆಂದು ಪಿನ್ನು, ದಬ್ಬಳಗಳಂತಹ ಚೂಪಾದ ವಸ್ತುಗಳನ್ನು ಕಿವಿಯೊಳಗೆ ಹಾಕಿಕೊಂಡು ಆಡಿಸಬೇಡಿ.
- ಕಿವಿ ನೋವು ಅಂತ ಕಿವಿಯೊಳಗೆ ಎಣ್ಣೆ ಹಾಕಿಕೊಳ್ಳಬೇಡಿ.
- ಕಿವಿಯನ್ನು ಆಗಾಗ ಶುದ್ಧಗೊಳಿಸುತ್ತಿರಿ.

ಕಿವಿಯೊಳಗೆ ಗುಗ್ಗೆ ತುಂಬಿಕೊಂಡು ಕಿವಿ ಕೇಳಿಸದಂತಾಗಬಹುದು. ಪರಿಣತರಿಂದ ಗುಗ್ಗೆ ತೆಗೆಸಿಕೊಳ್ಳಿ. ರಸ್ತೆ ಬದಿಯಲ್ಲಿ ಗುಗ್ಗೆ ತೆಗೆಯುತ್ತೇವೆಂದು ಹೇಳುವವರ ಹತ್ತಿರ ನಿಮ್ಮ ಕಿವಿ ಕೊಡಬೇಡಿ!

ಶ್ರವಣ ಯಂತ್ರ ಕೀಳರಿಮೆ ಬೇಡ

ನಿಮಗೆ ಕಿವಿ ಸರಿಯಾಗಿ ಕೇಳಿಸದಿದ್ದರೆ, ಶ್ರವಣ ತಜ್ಞರು ಶಿಫಾರಸು ಮಾಡಿದ ಶ್ರವಣ ಯಂತ್ರವನ್ನು ಧರಿಸಲು ನಾಚಿಕೆಪಟ್ಟುಕೊಳ್ಳಬೇಡಿ. ಶ್ರವಣ ಯಂತ್ರವನ್ನು ಧರಿಸಿದರೆ 'ನಾನು ಕಿವುಡ' ಅಂತ ಬೋರ್ಡ್ ಹಾಕಿಕೊಂಡ ಹಾಗೆ ಅಂತ ಭಾವಿಸಬೇಡಿ. ಏಕೆಂದರೆ ಕನ್ನಡಕ ಧರಿಸಿದವರೆಲ್ಲಾ ''ನಾನು ಕುರುಡ'' ಅಂತ ಬೋರ್ಡ್ ಹಾಕಿಕೊಳ್ಳಬೇಕಿಲ್ಲ ಎನ್ನುತ್ತಾರೆ ಐಶ್ ನಿರ್ದೇಶಕಿ ಪ್ರೊ. ಎಂ. ಪುಷ್ಪಾವತಿ

ಮೈಸೂರಿನ ಐಶ್‌ಗೆ ಬನ್ನಿ

ಯಾವುದೇ ರೀತಿಯ ವಾಕ್ ಮತ್ತು ಶ್ರವಣ ಸಮಸ್ಯೆಗಳಿಗೆ ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಗೆ(ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್) ಭೇಟಿ ನೀಡಬಹುದು. 1966ರಲ್ಲಿ ಕೇಂದ್ರ ಸರಕಾರ ಆರಂಭಿಸಿದ ಈ ಸ್ವಾಯತ್ತ ಸಂಸ್ಥೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ವ್ಯಾಪ್ತಿಗೆ ಬರುತ್ತದೆ. ವಾಕ್ ಶ್ರವಣ ಸಮಸ್ಯೆಗಳಿರುವ ವ್ಯಕ್ತಿಗಳ ತೊಂದರೆಗಳನ್ನು ನಿವಾರಿಸುವುದು ಈ ಸಂಸ್ಥೆಯ ಕೆಲಸ. ನವಜಾತ ಶಿಶುವಿನಿಂದ ಹಿಡಿದು ವೃದ್ಧರವರೆಗಿನ ವಯೋಮಾನದ ಎಲ್ಲರಿಗೂ ಇಲ್ಲಿ ಸೇವೆ ಲಭ್ಯ. ಯಾವುದೇ ರೀತಿಯ ವಾಕ್ ಶ್ರವಣ ದೋಷಗಳ ನಿವಾರಣೆಗಾಗಿ ಸಂಕೋಚವಿಲ್ಲದೆ ಈ ಸಂಸ್ಥೆಗೆ ಬನ್ನಿ.

ಪ್ರೊ. ಎಂ. ಪುಷ್ಪಾವತಿ, ನಿರ್ದೇಶಕರು,
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು 570006
ದೂ.ಸಂಖ್ಯೆ: 0821–2502000, 2502100

ಓದುಗರ ಪ್ರಶ್ನೆಗೆ ಐಶ್ ತಜ್ಞರ ಉತ್ತರ

ವಿಜಯ ಕರ್ನಾಟಕ ಫೋನ್ ಇನ್ ಕಾರ್ಯಕ್ರಮದಲ್ಲಿ ಜನರು ಕೇಳಿದ ಪ್ರಶ್ನೆಗಳಿಗೆ ಐಶ್ ನಿರ್ದೇಶಕಿ ಪ್ರೊ. ಎಂ.ಪುಷ್ಪಾವತಿ, ಓಟಿಸಿಡಿ ವಿಭಾಗದ ಮುಖ್ಯಸ್ಥೆ ಡಾ. ಎನ್. ಶ್ರೀದೇವಿ, ಆಡಿಯೋಲಜಿ ವಿಭಾಗದ ಡಾ. ಎಂ. ಸಂದೀಪ್, ಡಾ. ಅರುಣ್ ನೀಡಿದ ಉತ್ತರ ಇಲ್ಲಿದೆ.

ಪ್ರೊ.ಎಂ.ಪುಷ್ಪಾವತಿ

• ವಿಜಯಕುಮಾರ್, ಪಾಂಡವಪುರ

ನನಗೆ ಇತ್ತೀಚೆಗೆ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಏಕೆ ಎಂದು ಕೇಳಬಹುದೇ? ಇದು ಸಹಜವೇ ಅಥವಾ ಬೇರೆ ಏನಾದರೂ ಸಮಸ್ಯೆ ಇರಬಹುದೇ?

ನಾವು ದೇಹದ ಇತರ ಅಂಗಾಂಗಗಳಿಗೆ ತೊಂದರೆ ಆದಾಗ ಅವುಗಳಿಗೆ ಪರೀಕ್ಷೆ ಮಾಡಿಸಿ ಚಿಕಿತ್ಸೆ ಕೊಡಿಸುತ್ತೇವೆ. ಯಾವುದೇ ಮುಜುಗರ ಪಟ್ಟುಕೊಳ್ಳುವುದಿಲ್ಲ. ಆದರೆ, ಕಿವಿ ಬಗ್ಗೆ ಅಂದರೆ ನಮ್ಮ ಶ್ರವಣ ಸಾಮರ್ಥ್ಯದ ವಿಷಯದಲ್ಲಿ ಸರಿಯಾಗಿ ತಪಾಸಣೆ ಮಾಡಿಕೊಳ್ಳುವುದಿಲ್ಲ. ಕಿವಿ ಮಂದ ಆಗಿದೆ ಎಂದರೆ ಜನರು ಲೇವಡಿ ಮಾಡಬಹುದು ಎನ್ನುವ ಕಾರಣಕ್ಕೆ ಗೌಪ್ಯವಾಗಿಡುತ್ತೇವೆ. ಇದು ತಪ್ಪು. ನಿಯಮಿತವಾಗಿ ಕಿವಿಯನ್ನು ಕೂಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಆಗ ಸಮಸ್ಯೆ ಕಂಡು ಬಂದಲ್ಲಿ ಬೇಗ ಚಿಕಿತ್ಸೆ ಪಡೆದು ವಾಸಿ ಮಾಡಿಕೊಳ್ಳಬಹುದು. ಮುಚ್ಚಿಡುವುದರಿಂದ ಸಮಸ್ಯೆ ಹೆಚ್ಚಾಗುತ್ತದಲ್ಲದೆ ಪರಿಹಾರ ಕಾಣುವುದಿಲ್ಲ.

• ಕಿರಣ್‌ಕುಮಾರ್, ಹಾಸನ

ನನ್ನ ಸಹೋದರ ಪುತ್ರನಿಗೆ 11 ವರ್ಷ. ಆತನಿಗೆ ಡೆಂಗೆ ಜ್ವರ ಬಂದಿತ್ತು. ನಿಮೋನಿಯಾ ಆಗಿತ್ತು. ಬಳಿಕ ಎರಡೂ ಕಿವಿಯೂ ಕೇಳಿಸುತ್ತಿಲ್ಲ. ನರಕ್ಕೆ ತೊಂದರೆ ಆಗಿದೆ ಎನ್ನುತ್ತಿದ್ದಾರೆ. ಏನು ಮಾಡುವುದು?

ನಿಜ, ನರಕ್ಕೆ ತೊಂದರೆ ಆದರೆ ಕಿವಿ ಕೇಳಿಸದಂತೆ ಆಗುತ್ತದೆ. ಇದಕ್ಕೆ ಸೂಕ್ತ ಪರೀಕ್ಷೆ ಆಗಬೇಕು. ಕೆಲವು ತೊಂದರೆಯನ್ನು ಔಷಧಿಯಿಂದ ಪರಿಹಾರ ಕಂಡು ಕೊಳ್ಳಬಹುದು. ಆದರೆ, ಇನ್ನು ಕೆಲವು ತೊಂದರೆಗಳನ್ನು ಔಷಧಿಯಿಂದ ಪರಿಹರಿಸಲು ಸಾಧ್ಯವಾಗುವುದಿಲ್ಲ. ಪರೀಕ್ಷೆ ನಂತರ ಯಂತ್ರ ಬಳಸುವುದು ಉತ್ತಮ. ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗೆ ಸೋಮವಾರದಿಂದ ಶುಕ್ರವಾರದ ತನಕ ಬಂದು ಪರೀಕ್ಷೆ ಮಾಡಿಸಿಕೊಳ್ಳಬಹುದು. ಕೇಂದ್ರ ಸರಕಾರದ ರಜೆ ಇದ್ದ ಸಂದರ್ಭ ಸಂಸ್ಥೆಗೂ ರಜೆ ಇರುತ್ತದೆ. ಸಂಸ್ಥೆಗೆ ಬಂದು ತಜ್ಞರಿಂದ ಪರೀಕ್ಷಿಸಿದ ನಂತರ ಖಚಿತವಾದ ಅಭಿಪ್ರಾಯಕ್ಕೆ ಬರಬಹುದು.

... ಮಾಡುವಾಗ ನಡು ನಡುವೆ ಬಿಡುವು ತೆಗೆದುಕೊಳ್ಳಬೇಕು. ಉದ್ದುದ್ದ ವಾಕ್ಯಗಳಲ್ಲಿ ಮಾತನಾಡಬಾರದು. ಮಕ್ಕಳಿಗೆ ಪ್ರಶ್ನೆ ಕೇಳಿ ನಮ್ಮ ಧ್ವನಿಗೆ ವಿಶ್ರಾಂತಿ ನೀಡಬೇಕು.

ಪೋಷಕರಿಗೂ ಇದೆ ತರಬೇತಿ

ಕೆಲವು ಮಕ್ಕಳಲ್ಲಿ ಶ್ರವಣ ಹಾಗೂ ಮಾತಿನ ಸಮಸ್ಯೆ ಕಂಡು ಬಂದರೆ ಅದು ಕೇವಲ ಮಕ್ಕಳಿಗೆ ಸಂಬಂಧಿಸಿದ್ದು ಎನ್ನುವ ಭಾವನೆ ಬೇಡ. ಏಕೆಂದರೆ ಮಕ್ಕಳ ಕಲಿಕೆ ಹಾಗೂ ಪ್ರಯತ್ನದಲ್ಲಿ ಪೋಷಕರ ಪಾಲು ಸಾಕಷ್ಟು ಇರುತ್ತದೆ. ಮಗು ಮಾತನಾಡದೆ ಸನ್ನೆ ಮಾಡಿದರೆ ನಾವು ಕೂಡ ಅದನ್ನು ಅನುಸರಿಸಬಾರದು. ಈ ಕಾರಣಕ್ಕೆ ಇಂತಹ ಮಕ್ಕಳ ಪೋಷಕರಿಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ತರಬೇತಿ ನೀಡುತ್ತೇವೆ. ಮಕ್ಕಳೊಂದಿಗೆ ಹೇಗೆ ವರ್ತಿಸಬೇಕು, ಅವರನ್ನು ಮಾತನಾಡುವಂತೆ ಹೇಗೆ ಮಾಡಬಹುದು ಎಂದು ಹೇಳಿಕೊಡುತ್ತೇವೆ ಎಂದು ಸಂಸ್ಥೆಯ ತಜ್ಞರು ಹೇಳುತ್ತಾರೆ.

• ರವೀಂದ್ರ, ಕಾರ್ಕಳ

ಮಗನಿಗೆ 14 ವರ್ಷ. ಹುಟ್ಟಿನಲ್ಲಿ ತೊಂದರೆ ಇರಲಿಲ್ಲ. ಕಳೆದ ಐದು ವರ್ಷಗಳಿಂದ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಆತನಿಗೆ ಅಂಗವೈಕಲ್ಯ ದಾಖಲೆ ಕೊಡಬಹುದೇ?

ಮೊದಲು ಸಂಸ್ಥೆಯಲ್ಲಿ ತಜ್ಞರಿಂದ ಆತನ ಶ್ರವಣ ಸಾಮರ್ಥ್ಯದ ಸಂಪೂರ್ಣ ಪರೀಕ್ಷೆ ಆಗಬೇಕು. ಒಂದು ವೇಳೆ ತೊಂದರೆ ಕಂಡು ಬಂದು ಔಷಧಿಯಿಂದ ಪರಿಹಾರ ಕಾಣದಿದ್ದಲ್ಲಿ ಅಂಗವೈಕಲ್ಯ ದಾಖಲೆಯನ್ನು ನೀಡುತ್ತೇವೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಕೇಂದ್ರ ಸರಕಾರದ ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ ನಾವು ನೀಡುವ ದಾಖಲೆ ಅಧಿಕೃತವಾಗಿರುತ್ತದೆ. ಇದರಿಂದ ಬಾಲಕನಿಗೆ ಅಗತ್ಯ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

• ತಿಪ್ಪೇಸ್ವಾಮಿ, ಚಿತ್ರದುರ್ಗ

ಮಗನಿಗೆ 5 ವರ್ಷ. ಆದರೆ, ಮಾತನಾಡುತ್ತಿಲ್ಲ. ಕಿವಿ ಸರಿಯಾಗಿ ಕೇಳಿಸುತ್ತದೆ. ಇದಕ್ಕೆ ಕಾರಣ ಏನು ಎನ್ನುವುದು ತಿಳಿಯುತ್ತಿಲ್ಲ.

ಇದಕ್ಕೆ ತಕ್ಷಣ ನೀವು ಪರೀಕ್ಷೆ ಮಾಡಿಸಬೇಕು. ಏಕೆಂದರೆ ಮೂರರಿಂದ ಐದು ವರ್ಷದಲ್ಲಿ ಮಗು ಚೆನ್ನಾಗಿ ಮಾತನಾಡುವುದನ್ನು ಕಲಿಯುತ್ತವೆ. ಈ ಅವಧಿಯಲ್ಲಿ ನಿರ್ಲಕ್ಷ್ಯ ಮಾಡಬಾರದು. ಮಗುವಿಗೆ ಕಿವಿ ಸರಿಯಾಗಿ ಕೇಳಿಸುತ್ತದೆ ಎಂದರೆ ಬೇರೆ ಏನು ಸಮಸ್ಯೆ ಎನ್ನುವುದನ್ನು ಪತ್ತೆ ಹಚ್ಚಬೇಕಾಗುತ್ತದೆ. ಬುದ್ಧಿಶಕ್ತಿ ಹೇಗಿದೆ ಎನ್ನುವುದನ್ನು ನೋಡಬೇಕು. ಮಾತನಾಡದಿರಲು ಸಾಕಷ್ಟು ಕಾರಣಗಳಿರಬಹುದು. ಸಂಸ್ಥೆಯಲ್ಲಿ ಈ ರೀತಿಯ ಪರೀಕ್ಷೆಗೆ ಸಾಕಷ್ಟು ಸೌಲಭ್ಯಗಳಿವೆ. ಮಗುವಿಗೆ ಮಾತನಾಡುವ ತರಬೇತಿ ನೀಡುತ್ತೇವೆ. ಮಗುವಿನೊಂದಿಗೆ ಹೇಗಿರಬೇಕು ಎನ್ನುವ ಬಗ್ಗೆ ಪೋಷಕರಿಗೂ ಅರಿವು ಮೂಡಿಸುತ್ತೇವೆ.

• ಭದ್ರಶೆಟ್ಟಿ, ಬೆಳಗಾವಿ

ಬೆಳಗ್ಗೆ ಹಾಗೂ ಸಂಜೆ ವೇಳೆ ಯಾವುದೇ ತೊಂದರೆ ಇರುವುದಿಲ್ಲ. ಆದರೆ, ಮಧ್ಯಾಹ್ನದ ವೇಳೆ ಮಾತನಾಡುವಾಗ ತೊದಲುತ್ತದೆ. ಬಾಯಿ ಸಂಪೂರ್ಣವಾಗಿ ಒಣಗಿದಂತಾಗುತ್ತದೆ. ಮಾತೇ ಹೊರಡುವುದಿಲ್ಲ. ಏಕೆ ಹೀಗೆ?

ಆತಂಕ ಪಡುವ ಅಗತ್ಯ ಇಲ್ಲ. ಇದಕ್ಕೆ ಉತ್ತಮ ಪರಿಹಾರ ಎಂದರೆ ಜೊತೆಯಲ್ಲಿ ನೀರಿನ ಬಾಟಲಿ ಇಟ್ಟುಕೊಂಡು ಬಾಯಿ ಒಣಗದಂತೆ ನೀರು ಕುಡಿಯುತ್ತಾ ಇರಬೇಕು. ಧ್ವನಿ ವೃತ್ತಿಯಲ್ಲಿ ಇರುವವರು ಈ ಸಮಸ್ಯೆ ಅನುಭವಿಸುತ್ತಾರೆ. ಅಂದರೆ, ಶಿಕ್ಷಕರಲ್ಲಿ ಹೆಚ್ಚು. ಗಂಟಲಿನಲ್ಲಿ ಎರಡು ಸಣ್ಣ ಧ್ವನಿ ತಂತುಗಳಿರುತ್ತವೆ. ಇದು ಸೂಕ್ಷ್ಮ ಅಂಗ. ಇದರ ವೈಬ್ರೇಷನ್‌ನಿಂದ ಶಬ್ದ ಹೊರ ಬರುತ್ತದೆ. ಹೆಚ್ಚು ಮಾತನಾಡಿದರೆ ಶ್ರಮದಿಂದ ಹೀಗಾಗುತ್ತದೆ. ಪರಿಣಾಮ ಮಕ್ಕಳಿಗೆ ಪಾಠ

• ದತ್ತಾತ್ರೇಯ, ದಾವಣಗೆರೆ

ನನಗೆ 68 ವರ್ಷ. ಕಳೆದ 5 ವರ್ಷಗಳಿಂದ ಕಿವಿ ಸರಿಯಾಗಿ ಕೇಳುತ್ತಿಲ್ಲ. ಯಂತ್ರ ಬಳಸುತ್ತಿದ್ದೇನೆ. ಆದರೆ, ಕಾರ್ಯಕ್ರಮವೊಂದರಲ್ಲಿ ಸರಿಯಾಗಿ ಕೇಳಲಿ ಎಂದು ಯಂತ್ರದ ಶಬ್ದ ಹೆಚ್ಚು ಮಾಡಿದೆ. ಇದೀಗ ಕಿವಿ ಇನ್ನಷ್ಟು ಕೇಳಿಸದಂತಾಗಿದೆ. ಏನು ಮಾಡಲಿ?

ಅದೇ ನೀವು ಮಾಡಿದ ತಪ್ಪು. ಯಾವುದೇ ಕಾರಣಕ್ಕೂ ಕಿವಿಯಲ್ಲಿರುವ ಯಂತ್ರದ ಶಬ್ದವನ್ನು ಏಕಾಏಕಿಯಾಗಿ ಹೆಚ್ಚು ಮಾಡಬಾರದು. ಇದರಿಂದ ಕಿವಿಯ ತಮಟೆಗೆ ತೊಂದರೆಯಾಗುತ್ತದೆ. ಯಂತ್ರಕ್ಕೆ ಕಿವಿ ಹೊಂದಿಕೊಂಡಿರುತ್ತದೆ. ಅತಿಯಾದ ಶಬ್ದ ನೀಡಿದಾಗ ಸಮಸ್ಯೆಯಾಗುತ್ತದೆ. ಮುಂದಾದರೂ ಈ ಕುರಿತು ಎಚ್ಚರ ವಹಿಸಿ. ಇದೀಗ ಮತ್ತೊಮ್ಮೆ ನಿಮ್ಮ ಕಿವಿಯ ಸಾಮರ್ಥ್ಯದ ಬಗ್ಗೆ ಪರೀಕ್ಷೆ ನಡೆಸಬೇಕಿದೆ. ಸಂಸ್ಥೆಗೆ ದೂರದಿಂದ ಬರುವಾಗ ಮುಂಚಿತವಾಗಿ ಸಂದರ್ಶನದ ಸಮಯ ನಿಗದಿಪಡಿಸಿಕೊಂಡು ಆಗಮಿಸಬಹುದು.

• ಸಿದ್ದರಾಜು, ರಾಮನಗರ

ಕಳೆದ 15 ವರ್ಷಗಳ ಹಿಂದೆ ಕಣ್ಣಿನ ಭಾಗದಲ್ಲಿ ಮಾಂಸ ಬೆಳೆಯುತ್ತಿದೆ ಎಂಬ ಕಾರಣಕ್ಕೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಬಳಿಕ 10 ವರ್ಷದಿಂದ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ ಏಕೆ ಹೀಗೆ?

ಇದಕ್ಕೆ ಸೂಕ್ತ ಪರೀಕ್ಷೆ ನಡೆಸದೆ ಕಾರಣವನ್ನು ಹೇಳಲು ಸಾಧ್ಯವಿಲ್ಲ. ಶಸ್ತ್ರಚಿಕಿತ್ಸೆಯಿಂದಾಗಿ ನರಗಳಿಗೆ ತೊಂದರೆ ಆಗಿದೆಯೇ, ಅಥವಾ ಬೇರೆ ಯಾವುದಾದರು ಸಮಸ್ಯೆ ಕಂಡು ಬಂದಿದೆಯೇ ಎನ್ನುವುದನ್ನು ಪರೀಕ್ಷಿಸಬೇಕಿದೆ. ನರ ಪರೀಕ್ಷೆ ಮಾಡಿಸಿಕೊಳ್ಳಲು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗೆ ಭೇಟಿ ಕೊಡಿ.

• ಜಿ.ವಿ.ಭಟ್, ಹುಬ್ಬಳ್ಳಿ

ಕೆಲವು ಸಮಯದಿಂದ ನನ್ನ ಬಲ ಕಿವಿ ಗುಂಯ್ ಗುಟ್ಟುತ್ತದೆ. ಇದು ನಿರಂತರವಾಗಿ ಬರುತ್ತಿರುತ್ತದೆ. ಈ ಸಮಸ್ಯೆಗೆ ಕಾರಣ ಏನು? ಪರಿಹಾರ ಇದೆಯೇ?

ಇದಕ್ಕೆ ಕಿವಿ ಮೊರೆತ ಎಂದು ಹೇಳುತ್ತಾರೆ. ಇದಕ್ಕೆ ಕೇವಲ ಒಂದು ಅಥವಾ ಎರಡು ಕಾರಣವನ್ನು ಹೇಳಲು ಸಾಧ್ಯವಿಲ್ಲ. ಇಂದಿನ ನಮ್ಮ ಜೀವನ ಶೈಲಿಯಲ್ಲಿ ಹಲವು ಕಾರಣಗಳಿರಬಹುದು. ಇಲ್ಲವೇ, ದೈಹಿಕ ತೊಂದರೆಯಿಂದಾಗಿ ಆಗಿರಬಹುದು. ಇದಕ್ಕೆ ತಮ್ಮ ಸಂಸ್ಥೆಯಲ್ಲಿರುವ ತಜ್ಞ ವೈದ್ಯರು ಪರೀಕ್ಷೆ ನಡೆಸಿ ಸೂಕ್ತ ಚಿಕಿತ್ಸೆ ನೀಡುತ್ತಾರೆ.

• ಕಾಶಿನಾಥ್, ಪುಣೆ

ಮಗಳು ಮಾತನಾಡುತ್ತಿಲ್ಲ. ಇದಕ್ಕೆ ಕಾರಣ ಏನು ಎನ್ನುವುದು ಇಲ್ಲಿವರೆಗೆ ತಿಳಿದಿಲ್ಲ. ನಿಮ್ಮಿಂದ ಪರಿಹಾರ ಸಿಗಬಹುದೇ?

ಯಾವುದೇ ಪರಿಹಾರಕ್ಕೆ ಮುನ್ನ ವಿವರವಾದ ಪರಿಶೀಲನೆ ಅಗತ್ಯ. ತಜ್ಞರು ಪರೀಕ್ಷಿಸದೆ ಏನೂ ಹೇಳಲು ಸಾಧ್ಯವಾಗುವುದಿಲ್ಲ. ನೀವು ಪುಣೆಯಲ್ಲಿದ್ದು, ಮೈಸೂರಿಗೆ ಬರಲು ಸಮಸ್ಯೆಯಾದಲ್ಲಿ ಅಲ್ಲಿನ ಭಾರತೀಯ ವಿದ್ಯಾಪೀಠದಲ್ಲಿ ನಮ್ಮದೇ ವೈದ್ಯರಿದ್ದಾರೆ. ಅವರಿಂದ ಪರೀಕ್ಷೆ ಮಾಡಿಸಿಕೊಳ್ಳಿ. ಪರಿಹಾರ ಏನು ಎನ್ನುವುದನ್ನು ನಂತರ ತಿಳಿಸುತ್ತಾರೆ.

• ಜಗದೀಶ್, ಚಿಕ್ಕಮಗಳೂರು

ನನಗೆ ಈಗ 71 ವರ್ಷ. ಕೆಲವು ಸಮಯಗಳಿಂದ ಶ್ರವಣ ಸಾಮರ್ಥ್ಯ ಕಡಿಮೆಯಾಗುತ್ತಿವೆ. ಏನು ಮಾಡಲಿ?

ಕೆಲವು ಸಮಸ್ಯೆಗಳು ವಯೋಸಹಜವಾಗಿ ಕಾಣಿಸಿಕೊಳ್ಳುತ್ತದೆ. ಇತ್ತೀಚೆಗೆ 40–50 ವರ್ಷಕ್ಕೆ ಹಲವರಲ್ಲಿ ಶ್ರವಣ ಸಮಸ್ಯೆ ಕಂಡು ಬರುತ್ತದೆ. ನಾವು ಕಣ್ಣು ಸರಿಯಾಗಿ ಕಾಣಿಸದಿದ್ದಾಗ ಪರೀಕ್ಷೆ ಮಾಡಿಸಿಕೊಂಡು ಕನ್ನಡಕ ಹಾಕಿಕೊಳ್ಳುತ್ತೇವೆ. ಬಳಿಕ ಎಲ್ಲಾ ಕಾರ್ಯ ಸುಗಮ ಆಗುತ್ತದೆ. ಅದೇ ರೀತಿ ಕಿವಿಯನ್ನು ಕೂಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕಣ್ಣಿನಂತೆ ಕಿವಿಯೂ ಒಂದು ಭಾಗ. ತೊಂದರೆ ಇದ್ದಲ್ಲಿ ಶ್ರವಣ ಯಂತ್ರ ಹಾಕಿಕೊಂಡಲ್ಲಿ ಸಮಸ್ಯೆ ಪರಿಹಾರವಾಗುತ್ತದೆ.

• ಅಮೃತ, ಮಂಗಳೂರು

ಪ್ರಶ್ನೆ: ಕಿವಿಯೊಳಗಿನ ಗುಗ್ಗೆಯನ್ನು ನಾವೇ ಕ್ಲೀನ್ ಮಾಡಿಕೊಳ್ಳಬಹುದಾ?

ಉತ್ತರ: ಕಿವಿನಾಳದಲ್ಲಿ ಗುಗ್ಗೆಯಿದ್ದರೆ ಆಡಿಯೋಲಾಜಿಸ್ಟ್ ಹತ್ತಿರ ತೋರಿಸಿ. ಯಾವುದ್ಯಾವುದೊ ಉಪಕರಣವನ್ನು ಕಿವಿಯೊಳಗೆ ಹಾಕಬಾರದು. ಇದರಿಂದ ಕಿವಿಯ ತಮಟೆಗೆ ಸಮಸ್ಯೆಯಾಗುತ್ತದೆ.

• ಮಹಮ್ಮದ್ ಸಾಬು, ಬೆಂಗಳೂರು

ಪ್ರಶ್ನೆ: 4 ತಿಂಗಳಿನಿಂದ ಕಿವಿ ಸೋರುತ್ತಿದೆ ಏನು ಮಾಡುವುದು?

ಉತ್ತರ: ಕಿವಿಯೊಳಗೆ ಇನ್‌ಫೆಕ್ಷನ್ ಆದರೆ ಸೋರುತ್ತದೆ. ಇಎನ್‌ಟಿ ಸರ್ಜನ್ ಅವರನ್ನು ಭೇಟಿಯಾದರೆ ನಿಮ್ಮ ಸಮಸ್ಯೆಗೆ ಪರಿಹಾರ ಸಿಗುತ್ತದೆ.

• ಕುಮಾರಸ್ವಾಮಿ, ಶಿವಮೊಗ್ಗ

ಪ್ರಶ್ನೆ: ಹಿಯರಿಂಗ್ ಹೆಡ್ ಹಾಕದೆ ಔಷಧಿಯಿಂದ ಕಿವುಡುತನ ನಿವಾರಿಸಬಹುದೇ?

ಉತ್ತರ: ಕೇಳುವಿಕೆ ಸಮಸ್ಯೆ ಎಷ್ಟು ಪ್ರಮಾಣದಲ್ಲಿ ಇದೆ ಎಂಬುದರ ಮೇಲೆ ಹಿಯರಿಂಗ್ ಹೆಡ್ ನಿರ್ಧಾರವಾಗುತ್ತದೆ. ಯಾವುದೇ ಡ್ರಾಪ್ಸ್ ಹಾಕುವುದರಿಂದ ಕಿವುಡುವಿಕೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಹಿಯರಿಂಗ್ ಹೆಡ್ ಹಾಕಿಸಿಕೊಂಡರೆ ಎಲ್ಲರಂತೆ ನೀವು ಪ್ರತಿಯೊಂದನ್ನು ಆಲಿಸಬಹುದು.

• ಓಂಕಾರಪ್ಪ, ಚಿತ್ರದುರ್ಗ

ಪ್ರಶ್ನೆ: ಹಿಯರಿಂಗ್ ಹೆಡ್ ಹಾಕಿದ ಮೇಲೂ ಕರ್ಕಶ ಶಬ್ದ ಬರುತ್ತಿದೆ. ಏನು ಮಾಡುವುದು?

ಉತ್ತರ: ಹಿಯರಿಂಗ್ ಹೆಡ್ ಅನ್ನು ಸರಿಯಾಗಿ ಹಾಕಿಕೊಳ್ಳದಿದ್ದರೂ ಕೆಲವೊಮ್ಮೆ ಕರ್ಕಶ ಶಬ್ದ ಬರುತ್ತದೆ. ಅದರ ಸೆಟ್ಟಿಂಗ್ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕು. ಕಾಲಕಾಲಕ್ಕೆ ಸರ್ವಿಸ್ ಮಾಡಿಕೊಳ್ಳಬೇಕು.

• ದಾವಣಗೆರೆ, ಸವಿತಾ

ಪ್ರಶ್ನೆ: ನಾಲ್ಕೂವರೆ ತಿಂಗಳ ಮಗುವಿನ ಕಿವಿ ಸೋರುತ್ತಿದೆ. ಏನಾದರೂ ಸಮಸ್ಯೆ ಬರಬಹುದಾ?

ಉತ್ತರ: ಮಗುವಿನ ಕಿವಿ ಇನ್‌ಫೆಕ್ಷನ್ ಆಗದಂತೆ ನೋಡಿಕೊಳ್ಳಿ. ಕಿವಿ ಮತ್ತು ಮೂಗಿನ ನಡುವೆ ಟ್ಯೂಬ್ ಇರುತ್ತದೆ. ಹಾಗಾಗಿ ತಾಯಿ ಹಾಲು ಕುಡಿಸುವಾಗ ಫ್ಲ್ಯಾಟ್ ಆಗಿ ಕುಡಿಸಬಾರದು. ಮಗುವಿನ ತಲೆ ಸ್ವಲ್ಪ ಮೇಲ್ಭಾಗದಲ್ಲಿ ಇರಬೇಕು. ಕಾಲು, ಮೈ ಭಾಗ ಸ್ವಲ್ಪ ಕೆಳಮಟ್ಟದಲ್ಲಿರಬೇಕು. ಕೂಡಲೇ ವೈದ್ಯರ ನೆರವು ಪಡೆದುಕೊಳ್ಳಿ.

ಕರ್ನಾಟಕ ಮಾತ್ರವಲ್ಲದೇ ತಮಿಳುನಾಡು, ಕೇರಳ, ಪಾಂಡಿಚೇರಿ ಸೇರಿದಂತೆ ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಜನರಿಗೂ ನಮ್ಮ ಸಂಸ್ಥೆ ಸೇವೆ ನೀಡುತ್ತಿದೆ.

–ಎ.ಆರ್.ಕೀರ್ತಿ,
ಸಾರ್ವಜನಿಕ ಸಂಪರ್ಕಾಧಿಕಾರಿ, ಐಶ್, ಮೈಸೂರು

5 1 ವರ್ಷ ವಿಶೇಷ ಜಾಗೃತಿ ಇರಲಿ

ಹೆರಿಗೆಯಾದ ನಂತರ ಒಂದು ವರ್ಷದವರೆಗೆ ಮಗುವನ್ನು ವಿಶೇಷ ಆರೈಕೆಯಲ್ಲಿಡಬೇಕು. ಏಕೆಂದರೆ ಅದಕ್ಕೆ ಜಾಂಡಿಸ್ ನಂತಹ ಸಮಸ್ಯೆ ಕಂಡು ಬರಬಹುದು. ಇದು ಶ್ರವಣ ತೊಂದರೆಗೆ ಕಾರಣವಾಗಬಹುದು. ಮಕ್ಕಳ ಮೆದುಳಿನ ಬೆಳವಣಿಗೆಗೂ ಅಡ್ಡಿಯಾಗಬಹುದು. ಈ ಕಾರಣದಿಂದ ಪೋಷಕರು ಒಂದು ವರ್ಷಗಳವರೆಗೆ ಮಗುವಿನ ಎಚ್ಚರಿಕೆಯಲ್ಲಿರಬೇಕು.

6 ವಾತಾವರಣವೂ ಕಾರಣ

ಹಿಂದೆ 70 ವರ್ಷದ ನಂತರ ವಯೋಸಹಜವಾಗಿ ಶ್ರವಣ ಸಮಸ್ಯೆ ಬರಬಹುದು ಎನ್ನುವುದು ಸಾಮಾನ್ಯವಾಗಿತ್ತು. ಆದರೆ, ಇತ್ತೀಚೆಗೆ ಈ ಭೇದ ಇಲ್ಲದೆ ಎಲ್ಲಾ ವಯೋಮಾನದವರಲ್ಲಿಯೂ ಶ್ರವಣ ಸಮಸ್ಯೆ ಕಂಡು ಬರುತ್ತಿದೆ. ಇದಕ್ಕೆ ನಮ್ಮ ಸುತ್ತಮುತ್ತಲಿನ ವಾತಾವರಣ, ಜೀವನ ಶೈಲಿ ಕಾರಣ. ಶಬ್ದ ಮಾಲಿನ್ಯ ಹೆಚ್ಚಾಗುತ್ತಿದೆ. ಧೂಳು ಕಿವಿ ಸೇರುತ್ತಿದೆ. ಸೂಕ್ತ ಸಮಯದಲ್ಲಿ ನಾವು ಪರೀಕ್ಷೆ ಮಾಡಿಸಿಕೊಳ್ಳುವುದಿಲ್ಲ. ನಮ್ಮ ಬದುಕಿನ ಶೈಲಿ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಅನಗತ್ಯವಾಗಿ ಮೊಬೈಲ್ ಬಳಕೆ, ಹೆಚ್ಚಿಗೆ ಸಂಗೀತ ಕೇಳುವುದು, ಭಾರಿ ಶಬ್ದ ಇಟ್ಟುಕೊಳ್ಳುವುದು, ಹತ್ತಿರದಲ್ಲಿ ಪಟಾಕಿ ಸಿಡಿಸುವುದು ಕೂಡ ಅಪಾಯಕಾರಿ.

ಸಂಸ್ಥೆಯ ಸಂಪರ್ಕ ಹೇಗೆ

ದೂರದಿಂದ ಬರುವವರು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಇಲ್ಲವೆ ಇ-ಮೇಲ್ ಮೂಲಕ ಹೆಸರು ನೋಂದಾಯಿಸಿಕೊಂಡು ಸಂದರ್ಶನದ ಸಮಯ ನಿಗದಿಪಡಿಸಿಕೊಂಡು ಬರಬಹುದು.

ವೆಬ್‌ಸೈಟ್: www.aiishmysore.in
ಇ-ಮೇಲ್: director@aiishmysore.in
ದೂರವಾಣಿ: 0821-2510515
ಟೋಲ್ ಫ್ರೀ: 18004255218

ವಿಳಾಸ

ನಿರ್ದೇಶಕರು
ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ
(ಭಾರತ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸ್ವಾಯತ್ತ ಸಂಸ್ಥೆ)
ನೈಮಿಷಂ ಆವರಣ, ಮಾನಸಗಂಗೋತ್ರಿ, ಮೈಸೂರು-570006

ಅತ್ಯಾಧುನಿಕ ಹಿಯರಿಂಗ್ ಹೆಡ್‌ಗಳು

ಇತ್ತೀಚೆಗೆ ತಂತ್ರಜ್ಞಾನ ಹಾಗೂ ಆವಿಷ್ಕಾರದ ಪ್ರಯೋಜನ ಶ್ರವಣ ಸಮಸ್ಯೆಯನ್ನು ಸಾಕಷ್ಟು ನಿವಾರಣೆ ಮಾಡಲು ಸಹಕಾರಿಯಾಗಿದೆ. ಹಿಂದೆ ದೊಡ್ಡ ಗಾತ್ರದ ಕಿವಿಯಂತ್ರಗಳನ್ನು ಬಳಸಬೇಕಿತ್ತು. ಅದರ ಬ್ಯಾಟರಿ ಸಮಸ್ಯೆ, ಶಬ್ದ ನಿಯಂತ್ರಣ, ಆಗಿಂದಾಗ್ಗೆ ದುರಸ್ತಿಗೊಳ್ಳುವುದು ಮುಂತಾದ ಸಮಸ್ಯೆ ಇತ್ತು. ಆದರೆ, ಇತ್ತೀಚೆಗೆ ಇಂತಹ ತೊಂದರೆಗಳಿಲ್ಲದ ಆಧುನಿಕ ರೀತಿಯ ಪುಟ್ಟ ಯಂತ್ರಗಳು ಲಭ್ಯ ಇವೆ. ಇವುಗಳ ಗಾತ್ರ ಕೂಡ ಕಿರಿದಾಗಿದೆ. ಇಂತಹ ಉಪಕರಣಗಳು ಸ್ಪಷ್ಟ ಧ್ವನಿಯನ್ನು ಮಾತ್ರ ಕೇಳಿಸುತ್ತದೆ. ಉದಾಹರಣೆಗೆ ನಾಲ್ಕೈದು ಮಂದಿ ಮಾತನಾಡುತ್ತಿದ್ದರೆ ನಮಗೆ ಬೇಕಾದ ಒಬ್ಬರ ಧ್ವನಿಯನ್ನು ಮಾತ್ರ ಸ್ಪಷ್ಟವಾಗಿ ತಲುಪಿಸುತ್ತದೆ. ಉಳಿದ ಧ್ವನಿಯನ್ನು ತಗ್ಗಿಸುತ್ತದೆ. ಎರಡೂ ಕಿವಿಗೆ ಹಾಕಿಕೊಳ್ಳುವುದರಿಂದ ಸಹಜವಾಗಿ ವಿಂಗಡಣೆ ಮಾಡಿಕೊಳ್ಳುತ್ತವೆ. ಇದು ಅತ್ಯಂತ ಉಪಕಾರಿಯಾಗಿದೆ. ಅಲ್ಲದೆ, ಟಿವಿ ನೋಡುವಾಗ ಅದರ ಶಬ್ದವನ್ನು ನೇರವಾಗಿ ಕಿವಿಯಲ್ಲಿರುವ ಯಂತ್ರದ ಮೂಲಕ ಕೇಳಬಹುದಾಗಿದೆ. ಮೊಬೈಲ್ ಫೋನ್‌ಗಳನ್ನು ಕೂಡ ಬ್ಲೂಟೂತ್ ಮಾದರಿಯಲ್ಲಿ ಈ ಪುಟ್ಟ ಯಂತ್ರಕ್ಕೆ ಕನೆಕ್ಟ್ ಮಾಡಿಕೊಳ್ಳಬಹುದು. ಇದೆಲ್ಲಕ್ಕಿಂತ ವಿಶೇಷ ಎಂದರೆ ಕಂಪೆನಿಯೇ ನೇರವಾಗಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮೂಲಕ ಪೂರೈಸುವುದರಿಂದ ರಿಯಾಯಿತಿಯಲ್ಲಿ ಜನರಿಗೆ ಲಭ್ಯವಾಗಲಿದೆ ಎಂದು ತಜ್ಞರು ಹೇಳುತ್ತಾರೆ.

ಕಣ್ಣಿನಂತೆಯೇ ಕಿವಿಯೂ ಮುಖ್ಯ, ನಿರ್ಲಕ್ಷ್ಯ ಬೇಡ

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಕಳಕಳಿ

ವಿಜಯ ಕರ್ನಾಟಕ ಫೋನ್‌ಇನ್

ಮೈಸೂರಿನಲ್ಲಿ ನಡೆದ ವಿಜಯ ಕರ್ನಾಟಕ ಫೋನ್‌ಇನ್ ಕಾರ್ಯಕ್ರಮದಲ್ಲಿ ಪಿಸಿಪಿಡಿ ವಿಭಾಗದ ಮುಖ್ಯಸ್ಥೆ ಡಾ. ಎನ್.ಶ್ರೀದೇವಿ, ಐಶ್ ನಿರ್ದೇಶಕ ಪ್ರೊ. ಎಂ.ಪುಷ್ಪಾವತಿ, ಆಡಿಯೋಲಜಿ ವಿಭಾಗದ ಡಾ. ಎಂ. ಸಂದೀಪ್, ಡಾ. ಅರುಣ್ ಪಾಲ್ಗೊಂಡಿದ್ದರು.

ಮಾರ್ಚ್ 3 ರಂದು ವಿಶ್ವ ಶ್ರವಣ ದಿನ. ಇಂದು ವಿಶ್ವದ ನಾನಾ ಭಾಗಗಳಲ್ಲಿ ಶ್ರವಣದ ಕುರಿತು ಜಾಗೃತಿ ಮೂಡಿಸಲಾಗುತ್ತದೆ. ಶ್ರವಣ ಸಮಸ್ಯೆ ಕುರಿತು ಸಮಾಜದಲ್ಲಿ ಆರಿವು ಮೂಡಿಸಿ ಶೀಘ್ರ ಚಿಕಿತ್ಸೆಗೆ ಒಳಗಾಗುವಂತೆ ಮಾಡುವುದು ಈ ದಿನದ ಉದ್ದೇಶ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಕೇಂದ್ರ ಕಚೇರಿ ಹಾಗೂ ಸುಸಜ್ಜಿತ ಆಸ್ಪತ್ರೆ, ಸಂಶೋಧನಾ ಕೇಂದ್ರ ಹೊಂದಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಪ್ರೊ. ಎಂ.ಪುಷ್ಪಾವತಿ ಹಾಗೂ ತಜ್ಞವೈದ್ಯರಿಂದ 'ವಿಜಯ ಕರ್ನಾಟಕ' ಮೈಸೂರು ಕಚೇರಿಯಲ್ಲಿ ನೇರ ಫೋನ್ ಇನ್ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ರಾಜ್ಯ ಮಾತ್ರವಲ್ಲದೆ ಹೊರ ರಾಜ್ಯದಿಂದಲೂ ಅನೇಕ ಮಂದಿ ಕರೆ ಮಾಡಿ ತಮ್ಮ ಸಮಸ್ಯೆ ಹೇಳಿಕೊಂಡರು. ಇದಕ್ಕೆ ಸೂಕ್ತ ಪರಿಹಾರ ಹಾಗೂ ಸಲಹೆಯನ್ನು ತಜ್ಞರು ನೀಡಿದರು.

ವಿಕ ಸುದ್ದಿಟೋಕ ಮೈಸೂರು

ಶ್ರವಣದೋಷ ಎನ್ನುವುದು ವಯೋಸಹಜವಾಗಿ ಮಾತ್ರ ಬರುವುದಿಲ್ಲ. ಕೆಲವು ಮಕ್ಕಳಿಗೆ ಹುಟ್ಟುವಾಗಲೇ ಈ ದೋಷ ಇರಬಹುದು. ಇನ್ನು ಕೆಲವಿಗೆ ಬೆಳೆಯುತ್ತಾ ಏವಿಧ ಕಾರಣಗಳಿಂದಾಗಿ ಕಂಡು ಬರಬಹುದು. ಈ ಹಿನ್ನೆಲೆಯಲ್ಲಿ ಎಷ್ಟು ಶೀಘ್ರವಾಗಿ ಸಮಸ್ಯೆಯನ್ನು ಪೋಷಕರು ಗುರುತಿಸುತ್ತಾರೊ, ಅಷ್ಟೆ ಬೇಗ ಹಾಗೂ ಸುಲಭವಾಗಿ ಪರಿಹಾರ ಕಂಡುಕೊಳ್ಳಬಹುದು. ನಿರ್ಲಕ್ಷ್ಯ ಮಾಡಿದಷ್ಟು ಸಮಸ್ಯೆ ಹೆಚ್ಚು ಎಂದು ಹೇಳುತ್ತಾರೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಪ್ರೊ. ಎಂ. ಪುಷ್ಪಾವತಿ. 'ವಿಜಯ ಕರ್ನಾಟಕ' ಫೋನ್ ಇನ್‌ನಲ್ಲಿ ಮಾತನಾಡಿದ ಅವರು, ಮಗು ಜನಿಸಿದ ಒಂದು ತಿಂಗಳ ಒಳಗೆ ಶ್ರವಣ ಸಾಮರ್ಥ್ಯ ಪರೀಕ್ಷಿಸಬೇಕು. ಇದರಿಂದಾಗಿ ಸಮಸ್ಯೆ ಕಂಡು ಬಂದಲ್ಲಿ ಸೂಕ್ತ ಚಿಕಿತ್ಸೆ ನೀಡಬಹುದು. ಆದರೆ, ವಿಳಂಬ ಮಾಡಿದಷ್ಟು ಪರಿಹಾರ ಕಷ್ಟವಾಗಲಿದೆ. ಈ ಒಸ್ಟೆಲೆಯಲ್ಲಿ ಕೇವಲ ನಮ್ಮ ಸಂಸ್ಥೆಯಲ್ಲಿ ಮಾತ್ರವಲ್ಲದೆ ಹಲವು ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಶ್ರವಣ ಸಾಮರ್ಥ್ಯ ಪರೀಕ್ಷೆಗೆ ವ್ಯವಸ್ಥೆ ಮಾಡಿದ್ದೇವೆ. ಮೈಸೂರಿನ 17 ಆಸ್ಪತ್ರೆಗಳಿಗೆ ಈ ಸೌಲಭ್ಯ ನೀಡಿದ್ದೇವೆ. ಮೈಸೂರಿನ ಹೊರ ಭಾಗದಲ್ಲಿನುಮಾರು 8 ಕಡೆ ವ್ಯವಸ್ಥೆ ಮಾಡಿದ್ದೇವೆ. ಹೆಚ್ಚು ಮಕ್ಕಳು ಜನಿಸುವ ಆಸ್ಪತ್ರೆಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದೇವೆ ಎಂದು ಹೇಳಿದರು. ಕಿವಿ ಕೇಳದಿರುವುದಕ್ಕೂ ಮಾತನಾಡದಿರುವುದಕ್ಕೂ ಏನಾದರೂ ಸಂಬಂಧ ಇದೆಯೇ ಎಂದು ಹಲವು ಮಂದಿ ಕೇಳುತ್ತಾರೆ. ಇದನ್ನು ಹೇಳಲು ತಜ್ಞರೇ ಬೇಕಿಲ್ಲ. ಕಿವಿ ಕೇಳದವಲ್ಲಿ ಮಾತ್ರ ಪ್ರತಿಕ್ರಿಯೆ ನೀಡಲು ಸಾಧ್ಯ. ಆದೇ ರೀತಿ ಕಿವಿಯಲ್ಲಿ ಕೇಳಿದ ಶಬ್ದಗಳನ್ನು ಮಾತ್ರ ಮಗು ಪುನರುಚ್ಚರಿಸಲು ಪ್ರಯತ್ನಿಸುತ್ತದೆ. ಕೇಳಿದ ಮಾತನ್ನೇ ಕಲಿಯುತ್ತದೆ. ಈ ಕಾರಣಕ್ಕೆ ಮಾತನಾಡುವ ಮುನ್ನ ಅವುಗಳೆಲ್ಲವೂ ಕಿವಿಯಲ್ಲಿ ಮಗು ಕೇಳಿರಬೇಕು. ಪರಿಣಾಮ, ಎಷ್ಟು ಸಾಧ್ಯವೋ ಅಷ್ಟು ಬೇಗ ಮಗುವಿನ ಶ್ರವಣ ಸಾಮರ್ಥ್ಯ ಪರೀಕ್ಷೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶೇ.2 ರಿಂದ 3: ಭಾರತದ ಜನಸಂಖ್ಯೆಯಲ್ಲಿ ಅಂಗವಿಕಲರ ಪ್ರಮಾಣ

1 ತಿಂಗಳು: ಮಗು ಹುಟ್ಟಿದ ಮೊದಲನೇ ತಿಂಗಳಿನಲ್ಲಿಯೇ ಶ್ರವಣ ಪರೀಕ್ಷೆ ಅಗತ್ಯ

ಶೇ.19: ಅಂಗವಿಕಲರಲ್ಲಿ ಶ್ರವಣ ದೋಷದ ಪ್ರಮಾಣ

ಅತಿಯಾದ ಇಯರ್ ಫೋನ್ ಬೇಡ

ಮೊಬೈಲ್ ಹಾಗೂ ಇಯರ್ ಫೋನ್ ಎಷ್ಟರ ಪ್ರಮಾಣದಲ್ಲಿ ಬಳಸಬೇಕು ಎನ್ನುವ ಅರಿವು ಇರಬೇಕು. ಮೊಬೈಲ್‌ನಲ್ಲಿ ಮಾತನಾಡುವಾಗ ಇಯರ್ ಫೋನ್ ಬಳಸಿದರೆ ತಪ್ಪಲ್ಲ. ಆದರೆ, ಕೆಲವರು ಕಿವಿಯಿಂದ ಅದನ್ನು ತೆಗೆಯುವುದೇ ಇಲ್ಲ. ಸಂಗೀತ ಕೇಳುವುದರಿಂದ ಹಿಡಿದು ನಿರಂತರವಾಗಿ ಇಯರ್ ಫೋನ್ ಬಳಕೆ ಮಾಡುತ್ತಾರೆ. ಇದು ಶ್ರವಣ ಸಮಸ್ಯೆಗೆ ಕಾರಣ ಆಗಬಹುದು.

ತೊದಲುವಿಕೆ ಹೃತಿಕ್ ರೋಷನ್‌ಗೂ ಇತ್ತು!

ಹಲವು ತಾಯಂದಿರು ಕರೆ ಮಾಡಿ ಮಕ್ಕಳ ತೊದಲುವಿಕೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ ಉತ್ತರಿಸಿದ ಐಶ್ನ ಶ್ರವಣ ವಿಜ್ಞಾನ ವಿಭಾಗದ ಡಾ.ಎಂ. ಸಂದೀಪ್, ಮಕ್ಕಳ ತೊದಲುವಿಕೆ ಸಮಸ್ಯೆಯನ್ನು ಪೋಷಕರು ನಿರ್ಲಕ್ಷ್ಯ ಮಾಡಬಾರದು. ಮಕ್ಕಳಲ್ಲಿ ಇದು ಕಂಡು ಬಂದ ಕೂಡಲೇ ವೈದ್ಯರನ್ನು ಭೇಟಿ ಮಾಡಬೇಕು. ಹಾಗೆ, ನೋಡಿದರೆ ಬಾಲಿವುಡ್ ನಟ ಹೃತಿಕ್ ರೋಷನ್ ಆರಂಭಿಗೂ ತೊದಲು ಸಮಸ್ಯೆ ಇತ್ತು. ಸೂಕ್ತ ಚಿಕಿತ್ಸೆ ಪಡೆದು ಇದಿಗ ಸ್ಪಷ್ಟವಾಗಿ ಮಾತನಾಡುವ ಹಂತಕ್ಕೆ ಬಂದಿದ್ದಾರೆ. ಕೆಲವು ಮಕ್ಕಳು ಹುಟ್ಟಿನಿಂದಲೇ ಮಾತನಾಡುವುದಿಲ್ಲ. ಯಾವುದೋ ಸನ್ನೇಶದಲ್ಲೋ, ಭಯದಲ್ಲೋ ಅಥವಾ ಜ್ಞರ ತಪ್ಪಿದಾಗ ಮಾತು ಸಿಲ್ಲುವ ಸಾಧ್ಯತೆ ಇದೆ. ಹಾಗಾಗಿ ಮಕ್ಕಳು ಸರಿಯಾಗಿ ಮಾತನಾಡುವುದರ ಪೋಷಕರು ಉದಾಸೀನ ಮಾಡಬಾರದು. ಐಶ್‌ಗೆ ಬಂದರೆ ಮಕ್ಕಳಿಗೆ ಸ್ಪೀಚ್ ಥೆರಪಿ ಕೊಡಿಸಲಾಗುವುದು. ನಂತರ ಮಗು ಮಾತನಾಡುವುದನ್ನು ಕಲಿಯುತ್ತದೆ ಎಂದರು.

ಮಾತು ಮಹಾನ್ ಸಂಸ್ಕೃತಿ

ಇತ್ತೀಚೆಗೆ ಮಾತನಾಡುವ ಸಂಸ್ಕೃತಿ ಮಾಯವಾಗುತ್ತಿದೆ. ಇದು ಕೂಡ ಶ್ರವಣ ದೋಷ ಹೆಚ್ಚಾಗಲು ಕಾರಣ ಎಂದು ಹೇಳುತ್ತಾರೆ ಐಶ್ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ.ಹಿಂದಿನ ಕಾಲದಲ್ಲಿ ತುಂಬು ಸಂಸ್ಕೃತಿ ಇತ್ತು. ಮನೆಯಲ್ಲಿ ಹೆಚ್ಚು ಮಂದಿ ಇರುತ್ತಿದ್ದರು. ಹೆಚ್ಚೆಚ್ಚು ಮಾತನಾಡುತ್ತಿದ್ದರು. ನಿರಂತರ ಸಂವಹನ ಪ್ರಕ್ರಿಯೆ ನಡೆಯುತ್ತಿತ್ತು. ಇದರಿಂದ ಮಕ್ಕಳು ಬೇಗೆ ಪ್ರತಿಕ್ರಿಯೆ ನೀಡುತ್ತಿದ್ದರು. ಶೀಘ್ರವಾಗಿ ಮಾತು ಕಲಿಯುತ್ತಿದ್ದರು. ಹಿರಿಯರು ಮಕ್ಕಳಿಗೆ ಜೋಗುಳ ಹಾಡುತ್ತಿದ್ದರು, ಸ್ನಾನ ಮಾಡಿಸುವಾಗ ಹಾಡುತ್ತಿದ್ದರು. ಲಾಲಿ ಹಾಡು ಸಾಮಾನ್ಯವಾಗಿತ್ತು. ಇದರಿಂದ ಮಕ್ಕಳು ಬಹುಬೇಗ ಪ್ರತಿಕ್ರಿಯಿಸುತ್ತಿದ್ದವು. ಪ್ರತಿಕ್ರಿಯೆ ನೀಡದ ಮಕ್ಕಳಲ್ಲಿ ಶ್ರವಣ ದೋಷ ಇರುವುದನ್ನು ಹಿರಿಯರು ಗುರುತಿಸುತ್ತಿದ್ದರು. ಆದರೆ, ಈಗ ಮಕ್ಕಳು ಐದು, ಆರು ವರ್ಷವಾದರೂ ಮಾತನಾಡದಾಗ ಮಾತ್ರ ಆಸ್ಪತ್ರೆಗೆ ಬರುತ್ತಾರೆ ಎಂದು ಪ್ರೊ. ಪುಷ್ಪಾವತಿ ಹೇಳಿದರು.

ನಿರಂತರ ಕರೆ

ವಿಜಯ ಕರ್ನಾಟಕ ಫೋನ್ ಇನ್ ಕಾರ್ಯಕ್ರಮಕ್ಕೆ ನಿರಂತರವಾಗಿ ಕರೆಗಳು ಬಂದವು. ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30ರವರೆಗೆ ಸುಮಾರು 80 ಕರೆಗಳಿಗೆ ತಜ್ಞರು ಉತ್ತರಿಸಿದರು.

ಕರೆ ಮಾಡಿದವರು: ಕಲಾವತಿ ಹಾಸನ. ಕಾಂತರಾಜು, ಮಹಮ್ಮದ್ ಸಾಬು, ಫಿದಾ, ಕೃಷ್ಣಮೂರ್ತಿ, ಬೀರೇಗೌಡ ಬೆಂಗಳೂರು. ಪೂರ್ಣಿಮಾ ಹುಣಸೂರು. ಅಮೃತ ಮಂಗಳೂರು. ವೆಂಕಟರಾವು ದಾವಣಗೆರೆ. ಸಾಯಿಚರಣ್ ಚನ್ನಪಟ್ಟಣ. ಶಿವಾನಂದ ವಿಜಯಪುರ. ಓಂಕಾರಪ್ಪ ಚಿತ್ರದುರ್ಗ. ದಿನೇಶ್ ಮೈಸೂರು. ಕುಮಾರಸ್ವಾಮಿ, ಪೂಜಾ ಶಿವಮೊಗ್ಗ. ಪ್ರೇಮ, ಚಿಕ್ಕಮಗಳೂರು. ಸೋಮಲಿಂಗಪ್ಪ ಬಾಗಲಕೋಟೆ. ಚನ್ನಮಲ್ಲೇಗೌಡ, ತುಮಕೂರು. ಬಸಪ್ಪ ಬೆಳಗಾವಿ. ಜ್ಞಾನಿಪಾಟೀಲ್, ಉದಯ ಹುಬ್ಬಳ್ಳಿ. ಗಂಗಾ ವಿಜಯಪುರ. ವತ್ಸ ಬೆಂಗಳೂರು. ವಿಶ್ವನಾಥ್ ದೇವನೂರು. ಪವಿತ್ರ ಪುತ್ತೂರು. ಶ್ರೀನಿವಾಸ್ ರಾವ್ ಕಲಬುರುಗಿ, ಶಶಿಧರ್ ಬೆಂಗಳೂರು. ಶರಣ್ಣಪ್ಪ ದೇವಮರ್ಗ, ಮಾರುತಿ ಕೊಪ್ಪ. ಉಷಾ ಪ್ರಕಾಶ್ ಮೈಸೂರು ಹಾಗೂ ಇತರರು...

ಇಂದು ವಿಶ್ವ ಶ್ರವಣ ದಿನ

ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಐಶ್ ಕೇಂದ್ರ.

ಕೆಲವರು ಅನಗತ್ಯವಾಗಿ ತಮ್ಮಿಷ್ಟಕ್ಕೆ ಎಂಬಂತೆ ಮಾತ್ರೆಗಳನ್ನು ತೆಗೆದುಕೊಳ್ಳುತ್ತಾರೆ. ಆದರೆಲ್ಲಿಯೂ ವೈದ್ಯರು ಸಲಹೆ ನೀಡದೆ, ಅವರ ಚೀಟಿ ಇಲ್ಲದೆ ಯಾವುದೇ ರೀತಿಯ ಮಾತ್ರೆಗಳನ್ನು ಗರ್ಭಿಣಿಯರು ತೆಗೆದುಕೊಳ್ಳಬಾರದು. ಆನಗತ್ಯ ಮಾತ್ರೆ ಸೇವನೆ ಮಗುವಿನ ಶ್ರವಣದೋಷಕ್ಕೆ ಕಾರಣ ಆಗಬಹುದು.

-ಪ್ರೊ .ಎಂ.ಪುಷ್ಪಾವತಿ

ದುಬಾರಿ ಅಲ್ಲ

ಸಾಮಾನ್ಯವಾಗಿ ಕಿವಿ ಕೇಳದೆ ಇರುವವರು ಹಿಯರಿಂಗ್ ಹೆಡ್ ಹಾಕಲು ಮುಜುಗರಪಡುತ್ತಾರೆ. ಆದರೆ, ಇದಕ್ಕೆ ಕಲೆಕ್ಷಿಸಿಕೊಳ್ಳಬಾರದು. ಕನ್ನಡಕ ಧರಿಸುವುದು ಹೇಗೆ ಸಾಮಾನ್ಯವೋ ಹಾಗೇ ಕಿವಿಗೆ ಹಿಯರಿಂಗ್ ಹೆಡ್ ಹಾಕುವುದು ಮಾಮೂಲಿ ಸಂಗತಿ ಎಂಬುದನ್ನು ಭಾವಿಸಿಕೊಳ್ಳಬೇಕು. ಹೀಗೆಲ್ಲಾ ಡಿಜಿಟಲ್ ಹಿಯರಿಂಗ್ ಹೆಡ್‌ನಿಂದ ಹಿಡಿದು ನಾನಾ ನಮೂನಿ ಹಿಯರಿಂಗ್ ಹೆಡ್ ಸಿಗುತ್ತದೆ. ವೈದ್ಯರ ಸೂಚನೆ ಮೇರೆಗೆ ಸೂಕ್ತವಾದದ್ದನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಶ್ರವಣ ವಿಜ್ಞಾನ ವಿಭಾಗದ ಡಾ.ಎಂ. ಸಂದೀಪ್ ಸಲಹೆ ನೀಡಿದರು. ಇದೇ ವೇಳೆ ಹಿಯರಿಂಗ್ ಹೆಡ್ ದುಬಾರಿ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಖಾಸಗಿಯಾಗಿ ಹಿಯರಿಂಗ್ ಹೆಡ್ ತೆಗೆದುಕೊಂಡರೆ ದುಬಾರಿ ಆಗಿರುತ್ತದೆ. ಆದರ ಬದಲು ಐಶ್‌ನಲ್ಲಿ ತೆಗೆದುಕೊಂಡರೆ ಖಾಸಗಿಗಿಂತ ಕೇ.50ರಷ್ಟು ಕಡಿಮೆ ಬೆಲೆಯಲ್ಲಿ ಲಭ್ಯವಿದೆ ಎಂದರು.

ಶ್ರವಣ ದೋಷಕ್ಕೆ ಇವು ಕಾರಣಗಳು

ಇತ್ತೀಚೆಗೆ ನಮ್ಮಲ್ಲಿ ಶ್ರವಣ ಸಮಸ್ಯೆ ಹೆಚ್ಚಾಗಲು ಮುಖ್ಯ ಕಾರಣಗಳನ್ನು ವಿಜಯ ಕರ್ನಾಟಕ ಫೋನ್ ಇನ್ ಕಾರ್ಯಕ್ರಮದಲ್ಲಿ ಆಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಪ್ರೊ. ಎಂ.ಪುಷ್ಪಾವತಿ, ಪಿಸಿಪಿಡಿ ವಿಭಾಗದ ಮುಖ್ಯಸ್ಥೆ ಡಾ. ಎನ್.ಶ್ರೀದೇವಿ, ಆಡಿಯೋಲಜಿ ವಿಭಾಗದ ಡಾ. ಎಂ. ಸಂದೀಪ್, ಡಾ. ಅರುಣ್ ಆವರು ಪಟ್ಟಿ ಮಾಡಿದ್ದಾರೆ. ಅವುಗಳ ವಿವರ ಹೀಗಿದೆ.

1 ರಕ್ತಸಂಬಂಧದಲ್ಲಿ ವಿವಾಹ ಬೇಡ

ಕಿವಿ ಸೇರಿದಂತೆ ಕೆಲವು ಸಮಸ್ಯೆ ಕಂಡು ಬರಲು ಮುಖ್ಯ ಕಾರಣ ಸಂಬಂಧಿಕರೆಲ್ಲಿ ವಿವಾಹವಾಗುವುದು. ರಕ್ತ ಸಂಬಂಧದಲ್ಲಿ ಮದುವೆಯಾಗುವುದರಿಂದ ದೈಹಿಕ ಸಮಸ್ಯೆ ಸಾಮಾನ್ಯ ಎಂಬಂತಾಗಿದೆ. ಆದರಲ್ಲಿಯೂ ಶ್ರವಣ ಸಮಸ್ಯೆ ಕಂಡು ಬರುವ ಸಾಕಷ್ಟು ಮಂದಿ ಪೋಷಕರು ರಕ್ತಸಂಬಂಧಿಕರು ಎನ್ನುವದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಜಾಗೃತಿ ಯಾಗಬೇಕಿದೆ. ನಮ್ಮ ಆಸ್ತಿ ಮೂರನೆಯವರಿಗೆ ಹೋಗಬಾರದು ಎನ್ನುವ ಕಾರಣಕ್ಕೆ ಕೆಲವರು ಸಂಬಂಧಿಕರಲ್ಲಿಯೇ ವಿವಾಹ ಮಾಡುತ್ತಿರುವುದು ಇಂದಿಗೂ ಕಂಡು ಬರುತ್ತದೆ. ಇದು ಅಪಾಯಕಾರಿ.

2 ಅನುವಂಶಿಯವಾಗಿ ಬರಬಹುದು

ಕೆಲವು ದೈಹಿಕ ದೋಷರೆಗಳು ಅನುವಂಶಿಯವಾಗಿಯೂ ಬರಬಹುದು. ಆದೇ ರೀತಿ ಕಿವಿಯ ಸಮಸ್ಯೆ ಕೂಡ. ನಮ್ಮ ಕುಟುಂಬದಲ್ಲಿ ಯಾರಿಗಾದರು ಈ ಸಮಸ್ಯೆ ಇದ್ದಲ್ಲಿ ಮುಂದಿನ ಪೀಳಿಗೆಗೆ ಬರಬಹುದು. ಇದನ್ನು ಶೀಘ್ರ ಪತ್ತೆ ಹಚ್ಚಿದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಯಾವುದೇ ತೊಂದರೆ ಇದ್ದರೂ ತಕ್ಷಣ ಸ್ಪಂದಿಸಿ ಚಿಕಿತ್ಸೆ ಪಡೆಯಬೇಕಿದೆ. ಪೋಷಕರು ನಿರ್ಲಕ್ಷ್ಯ ಮಾಡಬಾರದು. ಆಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಕೇಂದ್ರ ಸರಕಾರದ ಸಂಸ್ಥೆಯಾಗಿರುವುದರಿಂದ ಬಡವರು ಕೂಡ ಇದರ ಪ್ರಯೋಜನ ಪಡೆದುಕೊಳ್ಳ ಬಹುದು. ಬಿಪಿಎಲ್ ಕಾರ್ಡ್ ಇದ್ದಲ್ಲಿ ಎಲ್ಲವೂ ಉಚಿತವಾಗಿ ದೊರಯಲಿದೆ.

3 ಗರ್ಭಿಣಿಯರು ಎಚ್ಚರ ವಹಿಸಬೇಕು

ಗರ್ಭಿಣಿಯಾಗಿದ್ದ ಸಂದರ್ಭವೇ ಹೊಟ್ಟೆಯಲ್ಲಿರುವ ಮಕ್ಕಳಿಗೆ ಸಮಸ್ಯೆ ಕಂಡು ಬರಬಹುದು. ಆದಕ್ಕೆ ಎಚ್ಚರ ವಹಿಸಬೆಕು. ಮೊದಲ ಮೂರು ತಿಂಗಳು ಗರ್ಭದಲ್ಲಿ ಮಗುವಿನ ಮುಖಭಾಗ ಬೆಳವಣಿಗೆಯಾಗುತ್ತದೆ. ಕಿವಿ, ಮೆದುಳು ಭಾಗದ ಮೇಲೆ ತೊಂದರೆ ಆಗದಂತೆ ಗರ್ಭಿಣಿಯರು ಎಚ್ಚರಿಕೆ ತೆಗೆದುಕೊಳ್ಳಬೇಕು.

4 ಹೆರಿಗೆ ಸಂದರ್ಭ ತೊಂದರೆಯಾಗಬಹುದು

ಮಕ್ಕಳಲ್ಲಿ ಶ್ರವಣ ಸಮಸ್ಯೆ ಬರಲು ಮುಖ್ಯ ಕಾರಣಗಳಲ್ಲಿ ಹೆರಿಗೆ ಸಂದರ್ಭ ಕಾಣಿಸಿಕೊಳ್ಳುವ ತೊಂದರೆಯೂ ಒಂದು. ಹೆರಿಗೆ ಸಂದರ್ಭ ಮಗುವಿನ ತಲೆಭಾಗ ಮೊದಲು ಹೊರಬರಬೇಕು. ಆದರೆ, ಕಾಲು ಭಾಗ ಹೊರ ಬಂದು ಮಗುವಿಗೆ ಆಕ್ಸಿಜನ್ ಕೊರತೆ ಕಾಡಬಹುದು. ಇಲ್ಲವೆ ಹೊಕ್ಕಳಬಳ್ಳಿ ಸುತ್ತಿಕೊಂಡು ಸಮಸ್ಯೆಯಾಗಬಹುದು. ಈ ಹಿನ್ನೆಲೆಯಲ್ಲೂ ಹೆರಿಗೆ ಸಂದರ್ಭ ಕೂಡ ಎಚ್ಚರಿಕೆ ಆಗತ್ಯ.

5 1 ವರ್ಷ ವಿಶೇಷ ಜಾಗ್ರತೆ ಇರಲಿ